ಅತಿದೂರ ಸಂಚಾರಿಸುವುದಿಲ್ಲ. ಈ ಹಡಗೇ ಒಂದು ಅಚ್ಚರಿ. ಸಮುದ್ರದಲ್ಲಿ ತೇಲುವ ಒಂದು ವಿಲಾಸೀ ಗಂಧರ್ವ ಪ್ರಪಂಚವನ್ನು ಸೃಷ್ಟಿಸುತ್ತದೆ.

'ಸಿಂಫೊನಿ ಆಫ್ ದಿ ಸೀಸ್' ಹಡಗು ಬಂದರಿಗೆ ಬಂದು ನಿಂತಾಗ ತಲೆ ಎತ್ತಿ ನೋಡಿದರೆ ಕತ್ತು ನೋವು ಬರುವಷ್ಟು ಎತ್ತರವಿದೆ. 1,184 ಅಡಿ ಉದ್ದವಿದೆ. 238 ಅಡಿ ಎತ್ತರದ ಈ ಹಡಗಿನಲ್ಲಿ 18 ಡೆಕ್‌ಗಳಿವೆ. 2,30,000 ಟನ್ ತೂಗುವ, ಈ ಹಡಗು 2,200 ಜನರಿಗೆ ಕೆಲಸ ನೀಡಿದೆ.

ಈ ಹಡಗಿನಲ್ಲಿ 2,759 ವಸತಿ ಕೋಣೆಗಳಿವೆ. 6,680 ಜನರ ಪ್ರವಾಸ ಮಾಡಬಹುದಾಗಿದೆ. ಅತಿಥಿಗಳ ಸೇವೆಗೆ 165 ಜನ ರೂಂ ಸರ್ವಿಸ್ ಸಿಬ್ಬಂದಿ ಕೆಲಸಮಾಡುತ್ತಾರೆ. ಅತಿಥಿಗಳು ಬರುವ ಮುನ್ನ ಸರ್ವ ಸಿದ್ಧತೆಗಳನ್ನು ನಡೆಸುತ್ತಾರೆ. 26,000 ಬಾತ್ ಟವಲ್ಸ್, 30,000 ಕೈ ಒರೆಸುವ ಟವಲ್ಸ್, 20 ಸಾವಿರ ಬಾತ್ ಮ್ಯಾಟ್ಸ್‌ಗಳನ್ನು ಈ ಹಡಗು ಒಂದು ವಾರದ ಬಳಕೆಗೆ ಹೊತ್ತೊಯ್ಯುತ್ತದೆ. ಅತಿ ಲಕ್ಷುರಿ ಬಯಸುವ ಪ್ರಯಾಣಿಕರಿಗಾಗಿ ಇದರಲ್ಲಿ 188 ವಿ.ಐ.ಪಿ. ವಿಶೇಷ ವಸತಿ ಗೃಹಗಳಿವೆ. ಅದರಲ್ಲಿ ಅತಿ ದುಬಾರಿಯಾದ ವಸತಿಯೆಂದರೆ, ಎರಡು ಮಹಡಿಯಲ್ಲಿ ಹರಡಿರುವ ರಾಯಲ್ ಲಾಫ್ಟ್ ಸೂಟ್. ಇದರಲ್ಲಿ 6 ಜನ ಇರಬಹುದು. ಡೈನಿಂಗ್ ಕೋಣೆ, ಡೆಕ್, ಆಟದ ಮನೆ, ಕೂರಲು, ಮಲಗಲು ಪ್ರತ್ಯೇಕ ವಿಶಾಲ ಕೋಣೆಗಳು, ಪ್ರತ್ಯೇಕ ಈಜುಕೊಳ, ಹೆಲಿಪ್ಯಾಡ್ ಈ ಎಲ್ಲ ವ್ಯವಸ್ಥೆಗಳ ಈ ವಸತಿ ಗೃಹವನ್ನು ಪಡೆಯಲು ವಾರವೊಂದಕ್ಕೆ ಸುಮಾರು 75 ಲಕ್ಷ ರೂಪಾಯಿಗಳನ್ನು ತೆರಬೇಕಾಗುತ್ತದೆ. ಇದೆಲ್ಲದರ ಜೊತೆಗೆ ಈ ಅತಿದುಬಾರಿ ವಸತಿಯ ಅತಿಥಿಗಳ ಸೇವೆಗೆಂದೇ 'ಸರ್ವಿಸ್ ಮ್ಯಾನೇಜರ್' ಕೂಡ ದೊರೆಯುತ್ತಾನೆ. ಅತಿಥಿಗಳ ಎಲ್ಲ ಬೇಡಿಕೆಗಳನ್ನು ಪೂರೈಸುವುದೇ ಆತನ ಕೆಲಸ. ಅದಕ್ಕೆಂದೇ ಈತನ ಹುದ್ದೆಯನ್ನು 'ರಾಯಲ್ ಜೀನಿ' ಎಂಬ ಹೆಸರಿನಿಂದ ಕರೆಯುತ್ತಾರೆ.

## ದಣಿವರಿಯದ ಜಾತ್ರೆ

ಈ ಹಡಗು ತನ್ನ ಅತಿಥಿಗಳ ಬಳಕೆಗೆಂದು ಪ್ರತಿವಾರ 10 ಲಕ್ಷ ಡಾಲರ್‌ಗಳ ವಸ್ತುಗಳನ್ನು ಖರೀದಿಸುತ್ತದೆ. ಅತಿಥಿಗಳು ಬರುವ ಮುನ್ನವೇ ಅದೆಲ್ಲವನ್ನೂ ಹಡಗಿಗೆ ಏರಿಸಲಾಗುತ್ತದೆ. 30ರಿಂದ 35 ಟ್ರಕ್‌ಗಳು ಹೊತ್ತು ತರುವ 400 ಟನ್ ವಸ್ತುಗಳನ್ನು ಹಡಗಿಗೆ ತುಂಬುವ ಉಸ್ತುವಾರಿಯನ್ನು ನಿಭಾಯಿಸಲು ನೂರಾರು ಜನರು ಕೆಲಸ ಮಾಡುತ್ತಾರೆ. ಪ್ರತಿ ವಾರ 340 ಮೆಟ್ರಿಕ್ ಟನ್‌ಗಳಷ್ಟು ತಾಜಾ ಉತ್ಪನ್ನಗಳನ್ನು ಇಲ್ಲಿ ಬಳಸಲಾಗುತ್ತದೆ. 25,000 ಪೌಂಡು ಚಿಕನ್, 11,000 ಪೌಂಡು ಕಲ್ಲಂಗಡಿ ಹಣ್ಣು, 140,000 ಬೇಕನ್, ತರಕಾರಿ ಹೀಗೆ ಪಟ್ಟಿ ಬೆಳೆಯುತ್ತದೆ. ಇವನ್ನೆಲ್ಲ ತುಂಬಿಕೊಳ್ಳಲು ಅತ್ಯಂತ ದೊಡ್ಡ ಉಗ್ರಾಣಗಳಿವೆ. ಶೀತಲ ಕೋಣೆಯ (ಫ್ರೀಜರ್) ವ್ಯವಸ್ಥೆಯೇ ಸುಮಾರು ಐದು ಸಾಧಾರಣ ಅಳತೆಯ ಮನೆಗಳಷ್ಟು ದೊಡ್ಡದಾಗಿವೆ. 1,350 ಸ್ಕ್ವೇರು ಮೀಟರುಗಳಷ್ಟು ರೆಫ್ರಿಜೆರೇಟರ್ ಜಾಗವಿದೆ.

ಸೋಡಾ, ಬಿಯರ್ ಮತ್ತು ವೈನ್



ಐಷಾರಾಮವೇ ಮೈದಳೆದಂತೆ ಕಾಣಿಸುವ ದೈತ್ಯ ಹಡಗು

ಪಾನೀಯಗಳು ಲೆಕ್ಕವಿಲ್ಲದಷ್ಟು ಖರ್ಚಾಗುವ ಈ ಹಡಗಿನಲ್ಲಿ ಪ್ರತಿವಾರ 25,000 ಬಿಯರ್ ಬಾಟಲಿಗಳು ಸಿದ್ಧವಿರುತ್ತವೆ. ವೋಡ್ಕಾ, ಜಿನ್ ಇತ್ಯಾದಿ ಪಾನೀಯವೂ ಹರಿಯುತ್ತವೆ. 6,680 ಪ್ರಯಾಣಿಕರಿಗೆ ಒಂದೇ ವಾರದಲ್ಲಿ ಇಷ್ಟೆಲ್ಲ ಬೇಕಾಗುತ್ತದೆಯೇ? ಅನ್ನುವ ಪ್ರಶ್ನೆ ಇಲ್ಲಿ ಇರುವುದಿಲ್ಲ. ಆಯ್ಕೆಗಳು ಮತ್ತು ಐಷಾರಾಮವೇ ಮುಖ್ಯವಾಗುವ, ತಿಂದುತೇಗಿ ಮಜದ ಅನುಭವ ಪಡೆಯಲೆಂದೇ ಈ ಶ್ರೀಮಂತ ಹಡಗಿನಲ್ಲಿ ಜನರು ದುಬಾರಿ ಹಣತೆತ್ತು ಪ್ರಯಾಣ ಮಾಡುತ್ತಾರೆ.

ಹಡಗಿನ ಮಧ್ಯ ಭಾಗವಾದ ಪ್ರೊಮೊನಾಡ, ಜನರ ಬಾಯಲ್ಲಿ 'ವಾಹ್...' ಎನ್ನುವ ಉದ್ಗಾರ ಹೊರಡಿಸುವಂತೆ ಎರಡಂತಸ್ತಿನಲ್ಲಿ ಕಟ್ಟಲಾಗಿದ್ದು, ಇಲ್ಲಿ ಶಾಪಿಂಗ್, ವಾಕಿಂಗ್ ಇತ್ಯಾದಿ ಮಾಡುತ್ತ ಈ ಬೃಹತ್ ಸುಂದರಿಯ ಒಡಲಿನ ಸೌಂದರ್ಯವನ್ನು ಕಣ್ತುಂಬಿಕೊಳ್ಳಬಹುದಾಗಿದೆ. ಬಾರ್, ರೆಸ್ಟೋರೆಂಟ್‌ಗಳಲ್ಲಿ ಕುಳಿತು ಉಲ್ಲಾಸದ ಸಮಯವನ್ನು ಅನುಭವಿಸಬಹುದಾಗಿದೆ. ಇಲ್ಲಿನ ಒಂದು ಪಾನೀಯದ ಬಾರ್ ಕೇವಲ ರೋಬಾಟ್‌ಗಳಿಂದಲೇ ನಡೆಯುತ್ತದೆ. ಜನರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತದೆ. 'ಬಯಾನಿಕ್ ಬಾರ್' ಎಂದು ಕರೆಯಲಾಗುವ ಈ ಬಾರ್‌ನ ನೌಕರರೆಂದರೆ ಎರಡು ರೋಬಾಟ್‌ಗಳು. ಇವು 30 ಬಗೆಯ ಸ್ಪಿರಿಟ್ ಗಳನ್ನು ನೀಡಬಲ್ಲವು. ಪ್ರತಿ ರೋಬಾಟ್ ದಿನವೊಂದಕ್ಕೆ ತಲಾ 1000 ಪಾನೀಯಗಳನ್ನು ಸರಬರಾಜು ಮಾಡುತ್ತದೆ.

ಹಡಗಿನಲ್ಲಿನ 'ರೈಸಿಂಗ್ ಟೈಡ್' ಎನ್ನುವ ಬಾರ್ ನೆಲದಿಂದ ಮೇಲೇರುವ ಒಂದು ಎಂಜಿನಿಯರಿಂಗ್ ಅದ್ಭುತವೆನಿಸಿದೆ. ಇಂತಹ ಅದ್ಭುತಗಳ, ಅಸಾಧಾರಣ ಅನುಭೂತಿಯ ಹಡಗಿನ ಸೌಲಭ್ಯಗಳನ್ನು ಅನುಭವಿಸಲು ಒಂದು ವಾರವಾದರೂ ಸಾಲದು ಎನ್ನುವುದು ಎಲ್ಲರ ಅನುಭವವಾಗಿದೆ.

'ಸಿಂಫೊನಿ ಆಫ್ ಸೀಸ್' ಹಡಗಿನಲ್ಲಿ ನಾಲ್ಕು ಈಜುಕೊಳಗಳು, ಮಕ್ಕಳ ವಾಟರ್ ಪಾರ್ಕ್, ಬ್ಯಾಸ್ಕೆಟ್ ಬಾಲ್ ಮೈದಾನ, ಎರಡು 43 ಅಡಿ ಎತ್ತರದ ರಾಕ್ ಕ್ಲೈಂಬಿಂಗ್, ಐಸ್ ಸ್ಕೇಟಿಂಗ್, ಓಡಲು ರನ್ನಿಂಗ್ ಟ್ರಾಕ್‌ಗಳು, ಸರ್ಫಿಂಗ್ ಸೌಲಭ್ಯಗಳೂ ಇವೆ. ಇಲ್ಲಿರುವ ಹತ್ತು ಮಹಡಿಗಳ ಎತ್ತರದ ಜಾರುವ ಸ್ಲೈಡ್ ಪ್ರಪಂಚದ ನೀರಿನ ಮೇಲಿನ ಅತಿ ಎತ್ತರದ ಜಾಗವೆನಿಸಿದೆ.

## ಹಡಗಿನಲ್ಲಿ ಉದ್ಯಾನ

ಸೆಂಟ್ರಲ್ ಪಾರ್ಕ್ ಎಂಬ ನೈಸರ್ಗಿಕ ಉದ್ಯಾನ ನಿರ್ಮಿಸಲಾಗಿದೆ. ಪ್ರಪಂಚದ ಎಲ್ಲೆಡೆಗಳಿಂದ ಸಮುದ್ರದ ವಾತಾವರಣದಲ್ಲಿ ಬೆಳೆಯಬಲ್ಲ ವನಸಿರಿಯನ್ನು ಈ ಹಡಗಿನ ಪ್ರಯಾಣಿಕರಿಗೆಂದೇ ತಂದು ಅತ್ಯಂತ ಸುಂದರ ಉದ್ಯಾನ ನಿರ್ಮಿಸಲಾಗಿದೆ. ಇದರಲ್ಲಿ 20,700 ಗಿಡಗಳನ್ನು ಬೆಳೆಸಲಾಗಿದೆ. ಉದ್ಯಾನದಲ್ಲಿ ಮಾಲಿಗಳು ಹಗಲು ರಾತ್ರಿ ಕೆಲಸಮಾಡುತ್ತಾರೆ. 15 ಅಡಿ ಎತ್ತರದ ಎರಡು ಗೋಡೆಗಳ ಮೇಲೆ ಲಂಬವಾಗಿ ಬೆಳೆಯಬಲ್ಲ 10,200 ಗಿಡಗಳನ್ನು ಹಬ್ಬಿಸಲಾಗಿದೆ.

ಪ್ರಪಂಚದ ಅತ್ಯಂತ ದೊಡ್ಡ ಹಡಗಿನ ಕಪ್ತಾನ 'ತಾನು ಬಹುಶಃ ಪ್ರಪಂಚದ ಅತಿ ಸಣ್ಣ ಕ್ಯಾಪ್ಟನ್' ಎಂದು ನಕ್ಕಿರುವುದೂ ಇದೆ. ಅತಿ ದೊಡ್ಡ ಹಡಗಾದರೂ ಅದರ ಎಲೆಕ್ಟ್ರೊ ಹೈಡ್ರಾಲಿಕ್ ಕಂಟ್ರೋಲ್‌ಗಳ ಕಾರಣ ಅತ್ಯಂತ ಸರಳ ಉಪಕರಣಗಳನ್ನು ಹೊಂದಿದೆ. ಅತ್ಯಂತ ಶಕ್ತಿಶಾಲಿ 6 ಎಂಜಿನ್‌ಗಳನ್ನು ಬಳಸುವ ಈ ಹಡಗು ಅದೆಷ್ಟು ದೈತ್ಯ ಗಾತ್ರದ್ದು ಎಂದರೆ, ಪ್ರತಿ ಬಂದರಿನಲ್ಲಿ ಒಬ್ಬ ಪೋರ್ಟ್ ಪೈಲಟ್ ಈ ಹಡಗಿನ ಬರುವಿಕೆಗಾಗಿ ಆ ಬಂದರಿನಲ್ಲಿ ನಿಂತು ಕಾಯುತ್ತಿರಬೇಕಾಗುತ್ತದೆ.

ಸಣ್ಣ ಪುಟ್ಟ ಹಡಗುಗಳು ಲಂಗರು ಹಾಕುವ ಸ್ಥಳಗಳಲ್ಲಿ ಈ ಬೃಹತ್ ನೌಕೆಯನ್ನು ಎಲ್ಲಿಗೂ ತಾಗದಂತೆ ಅತ್ಯಂತ ಕುಶಲತೆಯಿಂದ ನಿಲ್ಲಿಸಬೇಕಾಗುತ್ತದೆ. ಮತ್ತೆ ಹೊರಡುವಾಗಲೂ ಈ ಪೋರ್ಟ್ ಪೈಲಟ್ ಈ ಹಡಗನ್ನು ನಿರ್ದೇಶಿಸುತ್ತ